**ಕರ್ನಾಟಕ ಲೋಕಾಯುಕ್ತ**

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.6613/2014/ಸನಿಕಾಸ–2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:13.2.2017

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ**

**ವಿಷಯ:** ಚಿಕ್ಕನಾಯಕನಹಳ್ಳಿ ತಾಲ್ಲೂಕು ಗಾಣದಾಳು ಗ್ರಾಮಪಂಚಾಯತಿಯಿಂದ ದೂರುದಾರರ ಹೆಂಡತಿ ಶಾರದಮ್ಮ ಅವರಿಗೆ 2012ನೇ ಸಾಲಿನಲ್ಲಿ ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ಇನ್ನುಳಿದ 3 ಹಂತದ ಬಿಲ್ಲಿನ ಹಣವನ್ನು ಪಾವತಿಸುವ ಬಗ್ಗೆ.

*******

ಶ್ರೀ ಕೆ.ಹನುಮಂತಯ್ಯ, ಯಗಚಿಹಳ್ಳಿ ಗ್ರಾಮದ ನಿವಾಸಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ ಕೃಷ್ಣಾನಾಯಕ್, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ, ಚಿಕ್ಕನಾಯಕನಹಳ್ಳಿ, (2) ಶ್ರೀ ಜ್ಞಾನಮೂರ್ತಿ, ಪಂಚಾಯತಿ ಅಭಿವೃದ್ದಿ ಅಧಿಕಾರಿ, (3) ಶ್ರೀ ಶ್ರೀನಿವಾಸ, ಅಧ್ಯಕ್ಷರು, (4) ಶ್ರೀಮತಿ ತಾಜುನ್ನೀಸಾ, ಸದಸ್ಯರು, ಗಣದಾಳ ಗ್ರಾಮಪಂಚಾಯತಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ,(ಇನ್ನು ಮುಂದೆ 1 ರಿಂದ 4ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–**

ದೂರುದಾರರು ತಮ್ಮ ದೂರಿನಲ್ಲಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಗಾಣದಾಳು ಗ್ರಾಮಪಂಚಾಯತಿಯಿಂದ ದೂರುದಾರರ ಹೆಂಡತಿ ಶಾರದಮ್ಮ ಅವರಿಗೆ 2012ನೇ ಸಾಲಿನಲ್ಲಿ ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ಮನೆಗೆ ಆರ್ಥಿಕ ಸೌಲಭ್ಯ ಮಂಜೂರಾಗಿತ್ತು. ದೂರುದಾರರು ಮನೆ ಕಟ್ಟಲು ಪ್ರಾರಂಭಿಸಿ ಒಂದು ಹಂತದ ಬಿಲ್ಲನ್ನು ಪಡೆದಿರುತ್ತಾರೆ. ಮನೆ ಪೂರ್ಣಗೊಂಡ ನಂತರ ಇನ್ನುಳಿದ 3 ಬಿಲ್ಲಿನ ಹಣವನ್ನು ಎದುರುದಾರರು ಪಾವತಿಸಿರುವುದಿಲ್ಲ. ಈ ಬಿಲ್ಲಿನ ಮೊತ್ತ ಕೇಳಿದರೆ ಎದುರುದಾರರು 8000/–ರೂ.ಗಳ ಲಂಚದ ಬೇಡಿಕೆ ಇಟ್ಟಿರುತ್ತಾರೆ. ಈ ಕಾರಣದಿಂದ ಎದುರುದಾರರು ಮನೆಯ ಹಿಂಬದಿಯ ಬಾಗಿಲಿನ ಭಾವಚಿತ್ರವನ್ನು ತೆಗೆದು ಜಿ.ಪಿ.ಆರ್.ಎಸ್.ನಲ್ಲಿ ಅಳವಡಿಸಿ, ಹಣ ಪಾವತಿಯಾಗದಂತೆ ಮಾಡಿರುತ್ತಾರೆ. ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ದೂರು ಸಲ್ಲಿಸಿದ್ದಾರೆ.

3. 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ 2ರಿಂದ 4ನೇ ಎದುರುದಾರರು ದೂರುದಾರರಿಂದ 8000/- ರೂ.ಗಳ ಲಂಚದ ಬೇಡಿಕೆ ಇಟ್ಟಿರುವ ಬಗ್ಗೆ ತನ್ನ ಗಮನಕ್ಕೆ ಬಂದಿರುವುದಿಲ್ಲ. ಆಡಿಟ್ ಪ್ಯಾರಾದಲ್ಲಿ ಆಕ್ಷೇಪಣೆ ಇರುವುದರಿಂದ ಗ್ರಾಮಪಂಚಾಯತಿಗೆ ಅನುದಾನ ಬಿಡುಗಡೆ ಆಗಿರುವುದಿಲ್ಲವೆಂದು ಕಾರ್ಯದರ್ಶಿಗಳು ತಿಳಿಸಿರುತ್ತಾರೆ. ತಾನು ಈಗಾಗಲೇ ಆ ಪಂಚಾಯತಿಯಿಂದ ವರ್ಗಾವಣೆಗೊಂಡಿರುವುದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರಿಗೆ ದಿ.8.10.2012ರಂದು ಮೊದಲ ಹಂತದ ಹಣ ಜಮಾವಣೆ ಮಾಡಿದ್ದು, 2, 3 ಹಾಗೂ 4ನೇ ಹಂತದ ಹಣವನ್ನು ಬಿಡುಗಡೆ ಮಾಡಲು ಜಿ.ಪಿ.ಎಸ್.ನ್ನು ಕ್ರಮವಾಗಿ 17.4.2013, 26.5.2013ರಂದು ಅಪ್‌ಲೋಡ್ ಮಾಡಿದ್ದು, ಆದರೆ ವಸತಿ ನಿಗಮದವರು ಹೌಸ್ ಎಕ್ಸ್‌ಟೆನ್ಷನ್ ಎಂದು ತಕರಾರು ತೆಗೆದು ಬಿಲ್ ತಡೆಹಿಡಿದಿರುತ್ತಾರೆ. ತಾನು ದಿ.1.8.2013ರಂದು ಈ ಪಂಚಾಯತಿಯ ಕರ್ತವ್ಯಕ್ಕೆ ಹಾಜರಾಗಿದ್ದು, ಜಿ.ಪಿ.ಎಸ್. ಮಾಡಿರುವುದು ತನ್ನ ಅವಧಿಯಲ್ಲಿ ಇರುವುದಿಲ್ಲ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೋರಿದ್ದಾರೆ.

5. 3 ಮತ್ತು 4ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರಿಗೆ ಮೊದಲನೇ ಹಂತದ ಹಣ ಬಿಡುಗಡೆಯಾಗಿದ್ದು, ಇನ್ನುಳಿದ ಬಾಕಿ ಹಣ ಬಿಡುಗಡೆ ಮಾಡಲು ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ ರಾಜೀವ್ ಗಾಂಧಿ ವಸತಿ ನಿಗಮಕ್ಕೆ ವರದಿಯನ್ನು ಕಳುಹಿಸಲಾಗಿರುತ್ತದೆ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೋರಿದ್ದಾರೆ.

6. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನಲ್ಲಿನ ಅಂಶಗಳನ್ನು ಪುನರುಚ್ಚರಿಸಿದ್ದಾರೆ.

7. ದೂರುದಾರರು ಹಾಜರುಪಡಿಸಿದ ದೂರು ಮತ್ತು ದಾಖಲಾತಿಗಳು, ಆಕ್ಷೇಪಣೆ ಮತ್ತು ದಾಖಲಾತಿಗಳು, ಮತ್ತು ಪ್ರತ್ಯುತ್ತರ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, ದೂರುದಾರರ ಹೆಂಡತಿಯು ಬಸವ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಯಾಗಿದ್ದು ಅವರಿಗೆ ಒಂದು ಹಂತದ ಹಣ ಈಗಾಗಲೇ ಬಿಡುಗಡೆಯಾಗಿದೆಯೆಂದು ಉಭಯಪಕ್ಷಕಾರರೂ ಒಪ್ಪಿಕೊಂಡಿರುತ್ತಾರೆ. ಆದರೆ ಇನ್ನುಳಿದ 3 ಹಂತದ ಹಣ ಬಿಡುಗಡೆ ಮಾಡಲು ವಸತಿ ನಿಗಮವು ಆಕ್ಷೇಪಣೆಯೊಂದಿಗೆ ಬಿಲ್ಲನ್ನು ತಡೆಹಿಡಿದಿರುತ್ತದೆಂದು 2ನೇ ಎದುರುದಾರರು ತಿಳಿಸಿರುತ್ತಾರೆ. ವಸತಿ ನಿಗಮದವರು 2013ರಲ್ಲಿಯೇ ಹಣ ಬಿಡುಗಡೆಗೆ ಆಕ್ಷೇಪಣೆ ಎತ್ತಿದ ನಂತರ 2ನೇ ಎದುರುದಾರರು ಅದನ್ನು ಸರಿಪಡಿಸಿ ಪುನ: ಹಣ ಬಿಡುಗಡೆಗೆ ಪ್ರಯತ್ನಿಸಬಹುದಾಗಿತ್ತು. ಒಂದು ಸಾರಿ ಆಕ್ಷೇಪಣೆ ಎತ್ತಿದ ಮಾತ್ರಕ್ಕೆ ಮುಂದಿನ ಕ್ರಮಕೈಗೊಳ್ಳದಿದ್ದರೆ ದೂರುದಾರರಿಗೆ ಹಣ ಬಿಡುಗಡೆಯಾಗುವುದಿಲ್ಲ.

ಆದರೆ 2ನೇ ಎದುರುದಾರರು ಈ ಹಣ ಬಿಡುಗಡೆಗೆ ಮುಖ್ಯಜವಾಬ್ದಾರರಾಗಿದ್ದು, ಅದನ್ನು ಪ್ರಾಮಾಣಿಕವಾಗಿ ಮಾಡಿರುವುದಿಲ್ಲವೆಂದು ಕಂಡುಬರುತ್ತದೆ.

8. 2ನೇ ಎದುರುದಾರರು ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿದ್ದು, ಅವರು ದಿ.1.8.2013ರಂದು ಕರ್ತವ್ಯಕ್ಕೆ ಹಾಜರಾದ ನಂತರ ದೂರುದಾರರ ಖಾತೆಗೆ ಹಣ ಜಮಾ ಮಾಡಲು ಪ್ರಯತ್ನಿಸಿ ಅಥವಾ ಹಣಜಮಾ ಆಗಿದ್ದರೆ ಆ ವರದಿಯನ್ನು ಈ ಕಛೇರಿಗೆ ಸಲ್ಲಿಸಬಹುದಾಗಿತ್ತು. ಅದರೆ ಅವರು ಯಾವುದೇ ಪ್ರಯತ್ನ ಮಾಡದೆ ಇರುವುದರಿಂದ ದೂರುದಾರರು ತೊಂದರೆಗೆ ಸಿಲುಕಿದ್ದಾರೆಂದು ಕಂಡುಬರುತ್ತದೆ.

9. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ದೂರುದಾರರಿಗೆ ವಸತಿ ಯೋಜನೆಯಲ್ಲಿ ಇನ್ನುಳಿದ 3 ಹಂತದ ಹಣವನ್ನು ಅವರ ಖಾತೆಗೆ ವಸತಿ ನಿಗಮದಿಂದ ಜಮಾ ಮಾಡಿಸಲು ಸೂಕ್ತ ಕ್ರಮಕೈಗೊಳ್ಳಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡಬೇಕೆಂದು ಸಕ್ಷಮ ಪ್ರಾಧಿಕಾರವನ್ನು ಕೋರಲಾಗಿದೆ.

10. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

[ ನ್ಯಾಯಮೂರ್ತಿ ಸುಭಾಷ್ ಬಿ ಆಡಿ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.